<u>**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**</u>

**ಸಿ.ಸಿ. ಸಂಖ್ಯೆ: 654/2025**

**ಸಾಕ್ಷಿಯನ್ನು ದಿಃ 17.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಧರ್ಮರಾಜು | ಸಿಡಬ್ಲ್ಯೂಃ 1 | ಪಿಡಬ್ಲ್ಯೂಃ 1 |
| ತಂದೆಯ ಹೆಸರು | ಅಪ್ಪಾಜಿ | | |
| ವಯಸ್ಸು | 43 ವರ್ಷ | | |
| ಕೆಲಸ | ಅಬಕಾರಿ ನಿರೀಕ್ಷಕ , ಅಬಕಾರಿ ಕಛೇರಿ ಹುಣಸೂರು ವಲಯ. | | |
| ವಾಸಸ್ಥಳ | ಹುಣಸೂರು. | | |

<u>**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**</u>

ನಾನು ದಿಃ 30.11.2024 ರಿಂದ ಇಲ್ಲಿಯವರೆಗೆ ಹುಣಸೂರು ಅಬಕಾರಿ ನಿರೀಕ್ಷಕರ ಕಚೇರಿಯಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 25.04.2025 ರಂದು ಸಂಜೆ 4.00 ಗಂಟೆಗೆ ನಾನು ಮತ್ತು ಸಿಬ್ಬಂದಿಗಳಾದ ಚಾಸಾ-2 , 3 ರವರು ಹಾಗೂ ಇಲಾಖಾ ವಾಹನದ ಚಾಲಕರಾದ ಚಾಸಾ-4 ರವರೊಂದಿಗೆ ಇಲಾಖಾ ವಾಹನದಲ್ಲಿ ಹುಣಸೂರು ಪಟ್ಟಣದಿಂದ ಹೆಚ್ ಡಿ ಕೋಟೆ ರಸ್ತೆಯಲ್ಲಿ ಬರುವ ಬಾಚಾಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯ ಸರ್ಕಲ್ ನಲ್ಲಿ ಅನುಮಾನಸ್ಪದ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗೆ ಹುಣಸೂರು ಪಟ್ಟಣ ಕಡೆಯಿಂದ ಒಂದು ದ್ವಿ ಚಕ್ರ ವಾಹನದಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಇಟ್ಟು ಕೊಂಡು ಬರುತ್ತಿದ್ದ. ನಾವು ಕೈ ಅಡ್ಡ ಹಿಡಿದು ಆತನನ್ನು ತಡೆದು ನಿಲ್ಲಿಸಿದೆವು. ಸದರಿ ಪ್ಲಾಸ್ಟಿಕ್ ಚೀಲದಲ್ಲಿ ಏನಿದೆ ಎಂದು ಕೇಳಲಾಗಿ ಆತ ಗಾಬರಿಗೊಂಡು ಉತ್ತರಿಸಲಿಲ್ಲ. ಸದರಿ ಚೀಲ ಮತ್ತು ವಾಹನವನ್ನು ಶೋಧನೆ ಮಾಡಲು ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಾಯಾವಕಾಶ ಕಡಿಮೆ ಇದ್ದ ಕಾರಣ ಅಲ್ಲಿಯೇ ರಸ್ತೆಯ ಬದಿಯಲ್ಲಿ ಹೋಗುತ್ತಿದ್ದ ಇಬ್ಬರನ್ನು ಕರೆದು ನಮ್ಮ ಪರಿಚಯ ಮಾಡಿಕೊಂಡು ಪಂಚರಾಗಿ ಸಹಕರಿಸುವಂತೆ ಕೇಳಿ ನೋಟೀಸು ಜಾರಿ ಮಾಡಿದಾಗ ಅವರು ಒಪ್ಪಿಕೊಂಡರು. ಅವರ ಹೆಸರು ಚಾಸಾ-5

ಮಹೇಶ್ ಮತ್ತು ಚಾಸಾ-6 ಬೀರೇಶ್ ಆಗಿತ್ತು. ಅವರ ಸಮಕ್ಷಮ ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಅದಕ್ಕೆ ಪಂಚರ ಮತ್ತು ನನ್ನ ಸಹಿಯನ್ನು ಮಾಡಲಾಯಿತು. ನಂತರ ಸದರಿ ವಾಹನದ ಮೇಲೆ ಇದ್ದ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಪರೀಶೀಲಿಸಿದಾಗ ಅದರಲ್ಲಿ ಮದ್ಯದ ಟೆಟ್ರಾ ಪ್ಯಾಕ್ ಗಳು ಪತ್ತೆಯಾದವು. ಅವುಗಳನ್ನು ಕೆಳಗೆ ಸುರಿದು ಎಣಿಕೆ ಮಾಡಿ ನೋಡಲಾಗಿ ಒರಿಜಿನಲ್ ಛಾಯ್ಸ್ ಡಿಲಕ್ಸ್ ವಿಸ್ಕಿ ಹೆಸರಿನ ಭದ್ರತಾ ಚೀಟಿ ಇಲ್ಲದ ತಲಾ 90 ಎಂ ಎಲ್ ನ ಒಟ್ಟು 55 ಟೆಟ್ರಾ ಪ್ಯಾಕ್ ಗಳು ಇದ್ದವು. ಅವುಗಳನ್ನು ಹೊಂದಲು ಮತ್ತು ಸಾಗಾಣಿಕೆ ಮಾಡಲು ಪರವಾನಗಿ ವಗೈರೆ ಇದೆಯೇ ಎಂದು ಆಸಾಮಿಯನ್ನು ಕೇಳಲಾಗಿ ಯಾವುದು ಇಲ್ಲ ಎಂದು ತಿಳಿಸಿದ. ಆತನ ಹೆಸರು ವಿಳಾಸ ಕೇಳಲಾಗಿ ಚೆನ್ನಪ್ಪ ಬಿನ್ ಬಸವಯ್ಯ , 52 ವರ್ಷ , ಕೆ ಎಡ ತೊರೆ ಗ್ರಾಮ ಹೆಚ್ ಡಿಕಕೋಟೆ ತಾಲ್ಲೂಕು ಎಂದು ತಿಳಿಸಿದ. ಪರವಾನಗಿ ಇಲ್ಲದೇ ಮದ್ಯವನ್ನು ಸಾಗಾಣಿಕೆ ಮಾಡುವುದು ಕಾನೂನಿನ ಉಲ್ಲಂಘನೆ ಎಂದು ತಿಳಿಸಿದೆ. ಸದರಿ ವಾಹನವನ್ನು ಪರೀಶೀಲಿಸಿದಾಗ ಕಪ್ಪು ಕೆಂಪು ಬಣ್ಣದ ಬಜಾಜ್ ಡಿಸ್ಕವರ್ ಹೆಸರಿನ ಕೆ ಎ 45 ಎಸ್ 3715 ಆಗಿತ್ತು. ಮದ್ಯ ಮತ್ತು ವಾಹನವನ್ನು ಇಲಾಖೆಯ ವಶಕ್ಕೆ ಪಡೆದು ದೊರೆತ ಮದ್ಯದಲ್ಲಿ 30 ಟೆಟ್ರಾ ಪ್ಯಾಕ್ ಗಳನ್ನು ರಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ಸಂಗ್ರಹಿಸಿ ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ದಾರದಿಂದ ಹೊಲೆದು ಇಲಾಖಾ ಮೊಹರು ಸಂಖ್ಯೆ 310 ರಿಂದ ಮೊಹರು ಮಾಡಲಾಯಿತು.ಈ ಬಗ್ಗೆ ಸ್ಥಳದಲ್ಲಿ ಮಾದರಿ ಸೀಲಿನ ನಕಲನ್ನು ತಯಾರಿಸಲಾಯಿತು. ಆರೋಪಿಗೆ ನೋಟೀಸು ನೀಡಿ ತನಿಖೆಗೆ ಹಾಜರಾಗುವಂತೆ ತಿಳಿಸಲಾಯಿತು. ಸ್ಥಳದಲ್ಲಿ ಸಂಜೆ 4.00 ರಿಂದ 5.15 ರವರೆಗೆ ಮಹಜರು ಬರೆಯಲಾಯಿತು. ಅದನ್ನು ಚಾಸಾ-2 ರವರು ನನ್ನ ಉಕ್ತಲೇಖನದಂತೆ ಬರೆದಿದ್ದಾರೆ. ನಂತರ ಮಹಜರು ವಾಹನ ಮತ್ತು ಮುದ್ದೆ ಮಾಲಿನೊಂದಿಗೆ ಕಛೇರಿಗೆ ವಾಪಸ್ಸಾಗಿ ಸ್ವ ದೂರನ್ನು ತಯಾರಿಸಿಕೊಂಡು ಅದರ ಆಧಾರದ ಮೇಲೆ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಪಂಚರಿಗೆ ನೀಡಿದ ನೋಟೀಸನ್ನು ಈಗ ನೋಡುತ್ತಿದ್ದು ನಿಪಿ-1 ಮತ್ತು ನಿಪಿ-2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1 ಎ ಮತ್ತು ನಿಪಿ-2 ಎ ಎಂದು , ಶೋಧನಾ ಸಮುಚಿತ ಆಧಾರವನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು, ವಸ್ತುಗಳ ಪಟ್ಟಿಯನ್ನು ನಿಪಿ-4 ಎಂದು,

ಸಾಕ್ಷಿಯ ಸಹಿಯನ್ನು ನಿಪಿ–4 ಎ ಎಂದು, ಮಾದರಿ ಸೀಲಿನ ನಕಲನ್ನು ನಿಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿಪಿ–5ಎ ಎಂದು, ಮಹಜರನ್ನು ನಿಪಿ–6 ಎಂದು, ಸಾಕ್ಷಿಯ ಸಹಿಯನ್ನು ನಿಪಿ–6 ಎ ಎಂದು, ಆರೋಪಿಗೆ ನೀಡಿದ ನೋಟೀಸನ್ನು ನಿಪಿ–7 ಎಂದು, ಸಾಕ್ಷಿಯ ಸಹಿಯನ್ನು ನಿಪಿ–7 ಎ ಎಂದು, ಆರೋಪಿಯ ಸಹಿಯನ್ನು ನಿಪಿ–7 ಬಿ ಎಂದು, ಸ್ವ ದೂರನ್ನು ನಿಪಿ–8 ಎಂದು , ಸಾಕ್ಷಿಯ ಸಹಿಯನ್ನು ನಿಪಿ–8 ಎ ಎಂದು, ಪ್ರ ವವ ವರದಿಯನ್ನು ನಿಪಿ–9 ಎಂದು, ಸಾಕ್ಷಿಯ ಸಹಿಯನ್ನು ನಿಪಿ–9 ಎ ಎಂದು, ಆರೋಪಿಯನ್ನು ಮತ್ತು ಮುದ್ದೆ ಮಾಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಮತ್ತು ಮುದ್ದೆಮಾಲನ್ನು ನೋಡಿ ಗುರುತಿಸಿದ್ದು , ಮುದ್ದೆ ಮಾಲನ್ನು ಮು ಮಾ–1 ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ–9 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಜಿ ಆರ್ ಎಸ್ ವಕೀಲರಿಂದಃ**

ನನಗೆ ಸೇವಾ ಅವಧಿಯಲ್ಲಿ ಸಾಕಷ್ಟು ಪ್ರಕರಣಗಳನ್ನು ದಾಖಲಿಸಿ ಪ್ರ.ವ.ವ. ವರದಿಯನ್ನು ಸಲ್ಲಿಸಿದ ಅನುಭವ ಇದೆ. ನಾನು ದೂರು ಇಲ್ಲದೇ ಎಷ್ಟು ಪ್ರ.ವ.ವ. ವರದಿಗಳನ್ನು ದಾಖಲಿಸಿದ್ದೇನೆ ಎಂದು ನೆನಪಿಲ್ಲ. 25.04.2025 ರಂದು ಯಾರು ಠಾಣಾಧಿಕಾರಿಯಾಗಿದ್ದರು ಎಂದರೆ ಆ ವ್ಯವಸ್ಥೆ ಅಬಕಾರಿ ಇಲಾಖೆಯಲ್ಲಿ ಇಲ್ಲ. ಮಹಜರಿನಲ್ಲಿ ನಾನೇ ಸ್ವತಃ ತಪಾಸಣೆ ಮಾಡುತ್ತಿದ್ದಾಗ ಎಂದು ಬರೆದಿದ್ದೇನೆ. ತಪಾಸಣೆ ಮಾಡುತ್ತಿದ್ದೆ ಎಂದು ಹೇಳುವ ಸ್ಥಳದ ಚೆಕ್ಕು ಬಂದಿ ಪೂರ್ವಕ್ಕೆ ಬಾಚಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಪಶ್ಚಿಮಕ್ಕೆ ಖಾಸಗಿಯವರ ನಿವೇಶನಗಳು , ಉತ್ತರಕ್ಕೆ ಹುಣಸೂರು ಪಟ್ಟಣಕ್ಕೆ ಬರುವ ಹೆಚ್ ಡಿ ಕೋಟೆ ಮುಖ್ಯ ರಸ್ತೆ , ದಕ್ಷಿಣಕ್ಕೆ ಹೆಚ್ ಡಿ ಕೋಟೆಗೆ ಹೋಗುವ ಮುಖ್ಯ ರಸ್ತೆ. ನನ್ನ ಪ್ರಕಾರ ಸದರಿ ಸ್ಥಳ ಮೂರು ರಸ್ತೆಗಳು ಸೇರುವ ಸರ್ಕಲ್. ನಾನು ಮತ್ತು ಸಿಬ್ಬಂದಿಗಳು ವಾಹನದಿಂದ ಕೆಳಗೆ ಇಳಿದಿದ್ದೆವು. ಚಾಲಕರನ್ನು ಹೊರತುಪಡಿಸಿ ಎಲ್ಲರೂ ಸಮವಸ್ತ್ರದಲ್ಲಿ ಇದ್ದೆವು. ಆರೋಪಿಯನ್ನು ಮೊದಲ ಬಾರಿಗೆ 10 ಮೀ ದೂರದಲ್ಲಿ ನೋಡಿದೆವು. ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಲಿಲ್ಲ. ಆ ಸಮಯದಲ್ಲಿ ಪ್ರ.ವ.ವ. ವರದಿಯನ್ನು

ದಾಖಲಿಸಿರಲಿಲ್ಲ. ಆ ಸ್ಥಳದಲ್ಲಿ ನೀಡಿದ ನೋಟೀಸಿನಲ್ಲಿ ಕ್ರೈಂ ನಂ. ನಮೂದಿಸಿದ್ದೇನೆ. ನಾವು ಅಂಗ ಶೋಧನೆ ಮಾಡಿಕೊಂಡಿಲ್ಲ.

ಮುಮಾ–1 ಮುದ್ದೆಮಾಲು ನಮ್ಮ ಕಛೇರಿಯಲ್ಲಿ ಮತ್ತು ನಮ್ಮ ಬಳಿ ಇದ್ದ ಪೌಚ್ ಗಳು ಎಂದರೆ ಸರಿಯಲ್ಲ. ಬಿಳಿ ಪ್ಲಾಸ್ಟಿಕ್ ಚೀಲ ನ್ಯಾಯಾಲಯದ ಮುಂದೆ ಇಲ್ಲ. ನಾವು ಸಿಬ್ಬಂದಿಗಳೊಂದಿಗೆ ದಾಳಿಗೆ ಹೋಗಬೇಕಾದರೆ ಪೂರ್ವ ನಿಯೋಜಿತ ಪ್ರಕರಣ ಸಂಖ್ಯೆ ಸೃಷ್ಟಿ ಮಾಡಿಕೊಂಡಿರುವುದಿಲ್ಲ. ಆರೋಪಿಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖೆಯ ಅಂಕಿ ಅಂಶಗಳಿಗೋಸ್ಕರ ನಿಪಿ–1 ರಿಂದ 9 ರ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಆತನಿಗೆ ತೊಂದರೆ ಕೊಡಬೇಕೆಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ಘಟನಾ ಸ್ಥಳದ ಆಗ್ನೇಯ ದಿಕ್ಕಿಗೆ ಬಾಚಹಳ್ಳಿ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಚೆಕ್ಕು ಬಂದಿ ಸೃಷ್ಟಿಸಿ ಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.